
ತೆಗೆದುಬಿಟ್ಟರು. ನಿನ್ನ ಹೆಸರು, ಮುಖದ ಚಹರೆ ಸಮುದಾಯದೊಂದಿಗೆ ಸ್ವಲ್ಪನೂ ಮ್ಯಾಚ್ ಆಗ್ತಿಲ್ಲ. ಈಗ ನೌಕರಿಗೇ ಕಂಟಕ ಬಂದು ಬಿಟ್ಟಿದೆ ಅಲ್ಲೋ ಮಾರಾಯಾ. ನಿನ್ನ ಮಾರ್ಯಾಗ ಯಾವ ಬದಲಾವಣೆನೂ ಕಾಣಿಸ್ತಿಲ್ಲ. ಊರಾಗ 'ಮುಖಾರವಿಂದ' ಅಂತ ಹೊಸ ಅಂಗಡಿ ಬಂದದಂತ. ಅವರು ಎಂಥದ್ದು ಬೇಕು ಅಂಥದ್ದು ಚಹರಾ ರೂಪಿಸಿ ಕೊಡ್ತಾರಂತ. ಚಹರಾ ಬದಲಾವಣೆ ವಿದ್ಯಾ ನನಗ ಸಿದ್ಧಿಸಿರೊದರಿಂದ ನಾನೇನೂ ಆ ಅಂಗಡಿಗಿ ಭೇಟಿ ಕೊಟ್ಟಿಲ್ಲ. ನೀನು ಹೋಗಿ ಒಂದಿಷ್ಟು ಚಹರಾ ಬದಲಾಯಿಸಿಕೊಂಡು ಬಾ' ಎಂದ ಶೇಷಗಿರಿ ಪುರೋಹಿತ ಅಂಗಡಿಯ ವಿಳಾಸ ಹೇಳಿ ಪ್ರೇಮಚಂದನನ್ನು ಸಾಗಹಾಕಿದ್ದ.



★★★

ಆಟೊದಿಂದ ಕೆಳಗಿಳಿದ ಪ್ರೇಮಚಂದನ ಕಣ್ಣಿಗೆ ಕಾಮತ್ ಹೋಟೆಲಿನ ಮೇಲಿನ ಅಂತಸ್ತಿನಲ್ಲಿ ತೂಗುಹಾಕಿದ್ದ ಆಳೆತ್ತರದ 'ಮುಖಾರವಿಂದ' ಎನ್ನುವ ಬೋರ್ಡ್ ಕಣ್ಣಿಗೆ ರಾಚಿತು. ಮುಖಾರವಿಂದ ಶೀರ್ಷಿಕೆಯ ಕೆಳಗೆ ಸಣ್ಣ ಅಕ್ಷರಗಳಲ್ಲಿದ್ದ ಬದುಕು ಬದಲಿಸುತ್ತೇವೆ ಎನ್ನುವ ಅಡಿ ಟಿಪ್ಪಣಿ ಪ್ರೇಮಚಂದನನ್ನು ವಿಶೇಷವಾಗಿ ಆಕರ್ಷಿಸಿತು. ಜನನಿಬಿಡ ಪ್ರದೇಶದ ಆಯಕಟ್ಟಿನ ಜಾಗದಲ್ಲಿ ಆರಂಭಗೊಂಡ ಮಳಿಗೆ ಕಳೆದ ಹದಿನೈದು ದಿನಗಳಿಂದ ನಗರದ ಪ್ರಮುಖ ಆಕರ್ಷಣೆಯಾಗಿತ್ತು. ಮೊದಲೇ ಅಪಾಯಿಂಟ್‌ಮೆಂಟ್ ತೆಗೆದುಕೊಂಡಿದ್ದರಿಂದ ರಿಸೆಪ್ಷನ್ ಕೌಂಟರ್‌ನಲ್ಲಿ ಕುಳಿತಿದ್ದ ಮಹಿಳೆ ಪ್ರೇಮಚಂದನನ್ನು ನೋಡುತ್ತಲೇ ಎದ್ದು ನಿಂತು ಸ್ವಾಗತಿಸಿ ಕರೆದೊಯ್ದು ಗೆಸ್ಟ್ ರೂಮಿನಲ್ಲಿ ಕೂಡಿಸಿದಳು. ಈಗಾಗಲೇ ಗೆಸ್ಟ್ ರೂಮಿನಲ್ಲಿ ನಾಲ್ಕೈದು ಜನ ಮೊದಲೆ ಅಪಾಯಿಂಟ್‌ಮೆಂಟ್ ಪಡೆದು ಮುಖಚಹರೆಯ ಬದಲಾವಣೆಯ ಚಿಕಿತ್ಸೆಗೆಂದು ಬಂದು ಕುಳಿತಿದ್ದರು. ಅಲ್ಲಿ ಪ್ರೊಫೆಸರ್ ಕಾಳಪ್ಪ ಅವರನ್ನು ನೋಡಿ ಪ್ರೇಮಚಂದನಿಗೆ ಅಚ್ಚರಿಯಾಯಿತು. ಕಲಬುರಗಿಯ ಎಸ್.ಬಿ ಕಾಲೇಜಿನಲ್ಲಿ ಪ್ರೇಮಚಂದ ಡಿಗ್ರಿ ಓದುತ್ತಿದ್ದಾಗ ಅಲ್ಲಿ ಕಾಳಪ್ಪ ಇಂಗ್ಲಿಷ್ ಲೆಕ್ಚರರ್ ಆಗಿದ್ದರು. ಕಿಟ್ಸ್, ಶೇಕ್ಸ್ಪಿಯರ್, ಕಮೂ, ಕಾಫ್ಕಾರನ್ನು ಬೋಧಿಸುವಾಗಲೆಲ್ಲ ಕಾಳಪ್ಪ ಅಕ್ಷರಶಃ ಅವರನ್ನೆಲ್ಲ ತಮ್ಮೊಳಗೆ ಆವಾಹಿಸಿಕೊಂಡಿರುವರೇನೋ ಎಂದು ಭಾಸವಾಗುತ್ತಿತ್ತು. ಬೋದಿಲೇರನ 'ದಿ ಫ್ಲಾವರ್ಸ್ ಆಫ್ ಈವಿಲ್' ಕವನ ಸಂಕಲನದಿಂದ ಕವಿತೆ ಓದುವಾಗ ಇದೇ ಕಾಳಪ್ಪ ಕ್ಲಾಸ್ ರೂಮಿನಲ್ಲಿ ವಿದ್ಯಾರ್ಥಿಗಳೆದುರು ಬಿಕ್ಕಿ ಬಿಕ್ಕಿ ಅತ್ತಿದ್ದು ಇವತ್ತಿಗೂ ಪ್ರೇಮಚಂದನ ಕಣ್ಣಿಗೆ ಕಟ್ಟಿದಂತಿದೆ. ನಿವೃತ್ತರಾಗಿ ಮೂವತ್ತು ವರ್ಷಗಳಾದರೂ ತೊಂಬತ್ತರ ಇಳಿ ವಯಸ್ಸಿನಲ್ಲೂ ಲಾಬಿ ಶಿಫಾರಸುಗಳ ಸಹಾಯದಿಂದ ವಿಶ್ವವಿದ್ಯಾಲಯದ ಆಯಕಟ್ಟಿನ ಜಾಗಕ್ಕೆ ಭದ್ರವಾಗಿ ವಕ್ಕರಿಸಿಕೊಂಡಿರುವರೆಂದು ಆಗಾಗ ಅವರ ಹಳೆಯ ವಿದ್ಯಾರ್ಥಿಗಳ ಮಾತಿನ ನಡುವೆ ಈ ವಿಷಯ ಚರ್ಚೆಗೆ ಬರುತ್ತಿತ್ತು.

ಪ್ರೇಮಚಂದ ಹತ್ತಿರ ಹೋಗಿ ನಮಸ್ಕರಿಸಿ ತನ್ನ ಪರಿಚಯ ಹೇಳಿಕೊಂಡ. ಪ್ರೊಫೆಸರ್ ಕಾಳಪ್ಪ ತಮ್ಮ ಗತದ ನೆನಪುಗಳನ್ನು ಉತ್ಖನನಗೊಳಿಸಿ ಅಲ್ಲಿ ಪ್ರೇಮಚಂದನ ಚಿತ್ರಕ್ಕಾಗಿ ಹುಡುಕಾಡಿ ಸೋತರು. ಪ್ರೇಮಚಂದ ತನ್ನ ಬ್ಯಾಚಿನ ನಾಲ್ಕಾರು ವಿದ್ಯಾರ್ಥಿಗಳ ಹೆಸರು ಹೇಳಿದ. ಆಗಲೂ ಪ್ರೊಫೆಸರ್ ನೆನಪು ಕೈಕೊಟ್ಟಿತು. ಈ ನಡುವೆ ವಿಶ್ವವಿದ್ಯಾಲಯಕ್ಕೆ ನಾಮಧಾರಿ ವ್ಯಕ್ತಿ ವೈಸ್‌ಚಾನ್ಸಲರಾಗಿ ಬರುತ್ತಿರುವುದರಿಂದ ತಮ್ಮ ಸ್ಥಾನಕ್ಕೆ ಧಕ್ಕೆ ಉಂಟಾಗಲಿದ್ದು, ಅದಕ್ಕೆಂದೆ ಹೊಸ ವೈಸ್‌ಚಾನ್ಸಲರ್ ಸಮುದಾಯದ ಚಹರೆಯನ್ನು ತಮ್ಮ ಮುಖದಲ್ಲಿ ಆವಿರ್ಭವಿಸಿಕೊಳ್ಳಲು ಬಂದಿರುವುದಾಗಿ ಹೇಳಿದರು. ಅಷ್ಟರಲ್ಲಿ, ಪರಿಣತರು ಕರೆಯುತ್ತಿರುವರೆಂದು ರಿಸೆಪ್ಷನ್ ಕೌಂಟರ್‌ನಲ್ಲಿದ್ದ ಮಹಿಳೆ ಇಬ್ಬರನ್ನೂ ಒಳಗೆ ಕರೆದೊಯ್ದಳು. ಪ್ರೇಮಚಂದ ತನ್ನ ಕಂಪನಿಯ ನಿಯಮಗಳಿದ್ದ ಕೈಪಿಡಿಯನ್ನು ಪರಿಣತ ವ್ಯಕ್ತಿಗೆ ಕೊಟ್ಟು ಅವರು ತೋರಿಸಿದ ಕುರ್ಚಿಯಲ್ಲಿ ಕುಳಿತ. ಎದುರಿನ ವಿಶಾಲವಾದ